# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3043 (2513)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ವಿಷಯ : ರಾಷ್ಟ್ರೀಯ ಸಾಗರ ಮತ್ಸ್ಯ ನೀತಿ

(ಅ) ಕೇಂದ್ರ ಸರ್ಕಾರದ ರಾಷ್ಟ್ರೀಯ ಸಾಗರ ಮತ್ಸ್ಯ ನೀತಿಯಂತೆ ಸ್ಥಳೀಯ ಮೀನು-ಕೃಷಿಕರು ಮತ್ತು ಅವುಗಳ ಸಂಘ-ಸಂಸ್ಥೆಗಳನ್ನೊಳಗೊಂಡಂತೆ ಸಾಗರದಲ್ಲಿನ ಮತ್ಸ್ಯ ಸಂಪತ್ತನ್ನು ವ್ಯವಸ್ಥಿತ ರೀತಿಯಲ್ಲಿ ಕಾಪಾಡಲು ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯಕ್ರಮ ಮತ್ತು ಯೋಜನೆಗಳು ಯಾವುವು;

(ಆ) ಈ ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ದೊರೆತಿರುವ ಅನುದಾನವೆಷ್ಟು ಮತು ರಾಜ್ಯ ಸರ್ಕಾರ ಪೂರಕವಾಗಿ ನೀಡಿರುವ ಅನುದಾನವೆಷ್ಟು; (ಕಳೆದ 3 ವರ್ಷಗಳ ಜಿಲ್ಲಾವಾರು, ಯೋಜನೆವಾರು ಮತ್ತು ವರ್ಷಾವಾರು ಮಾಹಿತಿಯನ್ನು ನೀಡುವುದು)

(ಇ) ರಾಜ್ಯದಲ್ಲಿ ಸಾಗರ ಮತ್ಸ್ಯವನ್ನು ಸಂರಕ್ಷಿಸಲು ಮತ್ತು ವಿವಿಧ ಯೋಜನೆಗಳನ್ನು ನಿರ್ವಹಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗುರುತಿಸಿರುವ ಇಲಾಖೆಗಳು ಮತ್ತು ಸಂಸ್ಥೆಗಳು ಯಾವುವು? (ವಿವರ ನೀಡುವುದು)